Regd No M 1229 SRI 'Satyavadi' Mysore 42nd Year - 28—2—1958

ಪ್ರಮುಖ ವರ್ತಮಾನಗಳಿಗೆ
ಉಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ತೇದಾರ್ ಎಂ. ವಿ ಸುಬ್ಬರಾಯುರು [ಬಿಡಿಪ್ರತಿ 3 ಪೈ

Protect the cow
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ
ಗೋಸಂರಕ್ಷಣೆ ಮಾಡಿ

ರೆಲು-ಎತಿನ ಗಾಡಿ ಡಿಕಿ ಬಡಿದು ಮೂವರ ಮರಣ

ವಿಮಾನ ಅಪಘಾತದಲ್ಲಿ ಮೂವತ್ತು ಜನರ ಮರಣ

ಕುಪಿತ ಗುಂಪಿನಿಂದ ತಪ್ಪಿಸಿಕೊಂಡು ಸಚಿವರ ಓಟ

ಲಂಡ್ಕ 25— ಇಲ್ಲಿಯ ಒಂದು ಸಾರ್ವಜನಿಕ ಸಭೆಯಲ್ಲಿ ಬ್ರಿಟಿಷ್ ಮಂತ್ರಿಗಳ ಮಂತ್ರಿ ಮಿ|| ಹೆನ್ರಿ ಬ್ರುಕ್‌ರವರು ಭಾಷಣ ಮಾಡಲು ಹೊಂಟಾಗ, ಅವರ ಬಾಡಿಗೆ ಮನೆಯ ಬಗ್ಗೆ ಕುಪಿತ ಗುಂಪೊಂದು ಹೆಚ್ಚು ಗಲಾಟೆ ಮಾಡಲುಪಕ್ರಮಿಸಿದ್ದರಿಂದ, ಮಂತ್ರಿಗಳು ವಾಪಸ್ಸು ಓಡಬೇಕಾಯಿತು — ಬಾಡಿಗೆ ಮನೆಯ ಬ್ರಟನ್ನಿನ ಮಿಲಿಯಗಟ್ಟಲೆ ಮನೆಗಳಿಗೆ ಹೆಚ್ಚು ಬಾಡಿಗೆ ದೊಂಕಿಸುತ್ತದೆ — ಸಭೆಯಲ್ಲಿ ಟೇಬಲ್ ಎಸೆಯಲ್ಪಟ್ಟವು, ಮೈಕ್ರೋಫೋನ್ ಒಬ್ಬನ ತಲೆಯ ಮೇಲೆ ಬಿದ್ದು ಒಡೆಯಿತು ; ಸರಕಾರಿ ನೌಕರರಿಗೂ ಪ್ರದರ್ಶನಕಾರರಿಗೂ ಭಾರಿ ಹೊಡೆದಾಟ ಪ್ರಾರಂಭವಾಗಿ, ಕುರ್ಚಿಗಳೂ, ಸೀಸೆಗಳೂ ಈ ಮೇಳಾದಲ್ಲ ಎಸೆದಾಡಲ್ಪಟ್ಟವು — ಮಂತ್ರಿಗಳು ಮನೆಪೆ ಸರಿಯಾಗಿದೆ ಎಂದು ತಿಳಿಸಲು ಪ್ರಯತ್ನಿಸಿದಾಗ ಅವರ ತಲೆಯ ಮೇಲೆ ' ಬಾಡಿಗೆ ಶಾಸನ ರದ್ದಾಗಲಿ ' ' ಮನೆಯಿಂದ ಅಟ್ಟಳೂಡದು ' ' ಹೆನ್ರಿಯನ್ನು ಓಡಿಸಿ ' ಎಂದು ದಪ್ಪನಾಗಿ ಒರೆಯಲ್ಪಟ್ಟಿದ್ದ ಆಕಾಶಬುಟ್ಟಿಗಳು ಓಡಾಡಿದವು.

ಪೌರಸಭೆ

ಮೈಸೂರು ಪೌರಸಭೆಯ ಸಾಧಾರಣ ಸಭೆ ನಿನ್ನೆ ಸಂಜೆ ಪೌರಸಭೆ ಉಪಾಧ್ಯಕ್ಷರಾದ ಶ್ರೀ ಡಿ. ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಟಿ. ತಮ್ಮಣ್ಣನವರ ನಿಧನಕ್ಕೆ ಸಂತಾಪಿಸಿ ಸಭೆಯನ್ನು ಮುಂದುವಂಸಲಾಯಿತು ಮುಂದವರಿದ ಸಭೆ ಮಾರ್ಚ್ 5 ನೇ ತಾ|| ಮಧ್ಯಾಹ್ನ ಸೇರುವುದು.

ಖಂಡನೆ

ಬೊಂಬಾಯಿ 27 — ಏರ್ ಇಂಡಿಯಾ ಇಂಟರ್ನ್ಯಾಷನಲ್ ಮತ್ತು ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನ್ನಿನ ಕಾರ್ಮಿಕರ ಸಭೆ ಸೇರಿ ಬೆಂಗಳೂರು ಹಿಂದೂಸ್ತಾನ ವಿಮಾನ ಕಾರ್ಖಾನೆ ಗೋಳೀಬಾಂನ್ನು ಖಂಡಿಸಿದರು. ಕಾರ್ಖಾನೆಯ ಆಕಾಂಕ್ಷೆಯನ್ನು ತೆಗೆಯದಿದ್ದರೆ ತಾವು ಸುಮ್ಮನಿರುವದಿಲ್ಲವೆಂದು ಎಚ್ಚರಿಸಿದೆ

ಅಣು ಬಾಂಬು ಸಿಡಿತ

ವಾಷಿಂಗ್ಟನ್ 27 — ಮತ್ತೊಂದು ಬಲವಾದ ಅಣು ಪ್ರಯೋಗವನ್ನು ರಷ್ಯ ಮಾಡಿತೆಂದು ಅಮೇರಿಕಾದ ಅಣುಶಕ್ತಿ ಸಮಿತಿ ಪ್ರಕಟಿಸಿದೆ.

ರಕ್ಷಣಾ ಖರ್ಚು

ಕಂಬಾಚಿ 27 — ಪಾಕಿಸ್ತಾನ ಹಣ ಕಾಸಿನ ಮಂತ್ರಿ, ಅಮ್ಜದ್‌ಅಲಿಯವರು ಪಾಕಿಸ್ತಾನ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮಂಡಿಸಿರುವ ಅಂದಾಜುಪಟ್ಟಿಯಲ್ಲಿ ರಕ್ಷಣಾ ವೆಚ್ಚಕ್ಕೆ ರೂ. 100 ಕೋಟಿ ಕಾಣಿಸಿದೆ

ಮತ್ತೆ ಹತ್ತು ವರ್ಷ ಬೇಡಿಕೆ

ಕೋಲಾರ ಜಿಲ್ಲೆ ನಿಮ್ನ ವರ್ಗದ ಸಭೆಯಲ್ಲಿ ನಿಮ್ನ ವರ್ಗದವರಿಗೆ ಮತ್ತೆ 10 ವರ್ಷ ಸೌಕರ್ಯ ಮುಂದುವರಿಸಬೇಕೆಂದು ಕೇಳುವ ನಿರ್ಣಯವಾಯಿತು

ಸಾಂಗ್ಲಿ 27 — ಇಲ್ಲಿಗೆ ಬಂದಿರುವ ವಂದಿ ಪ್ರಕಾರ ಈ ಮಧ್ಯಾಹ್ನ ಇಲ್ಲಿಗೆ 4 ಮೈಲಿಗಳ ದೂರದ ಕಾಸಿಂಗಿನಲ್ಲಿ ದಕ್ಷಿಣ ರೈಲ್ವೆಯ ಪ್ಯಾಸೆಂಜರು ರೈಲೊಂದು ಎತ್ತಿನ ಗಾಡಿಗೆ ಡಿಕ್ಕಿ ಒಡಿದು ಒಳಗಿದ್ದವರ ಪೈಕಿ 3 ಜನರು ಸತ್ತು ಹೋದರು ಗಾಯಗೊಂಡ ಮೂವರು ಆಸ್ಪತ್ರೆಗೆ ದಾಖಲಾದರು.

ಆಲಿಕಲ್ಲು ಮಳೆಯಿಂದ ಮರಣ

ರಾಯಪುರ 27— ಈ ಜಿಲ್ಲೆಯ ಸರೈಪಲ್ಲಿ ತಸ್ಸೆಯಲ್ಲಿ ಭಾರಿ ಆಲಿಕಲ್ಲು ಮಳೆ ಬಿದ್ದು 6 ಜನ ಸತ್ತು, 20 ಮಂದಿ ಗಾಯಗೊಂಡರೆಂದೂ, ಈ ಭಾಗದ 10 ಗ್ರಾಮಗಳಲ್ಲಿಯೂ ಹತ್ತು ನಿಮಿಷ ಭಾರಿ ಆಲಿಕಲ್ಲು ಮಳೆಗಳಾಗಿ, ಹತ್ತಾರು ಮನೆಗಳು ಕುಸಿದುಬಿದ್ದವೆಂದೂ, ಈಳು ಳಿ ಮತ್ತು ಸಕ್ಕರೆ ಬೆಳೆ ನಷ್ಟಗೊಂಡಿವೆಯೆಂದೂ ವಂದಿಯಾಗಿದೆ.

ಕೈಕೋಳ ಹಾಕಿತ್ತು

ಹೈದರಾಬಾದು 27 — ಬೆಂಗಳೂರಿನಲ್ಲಿ 3 ದಿನಗಳ ಹಿಂದೆ ದಸ್ತಗಿರಿ ಮಾಡಲ್ಪಟ್ಟ ಸತ್ಯಾಗ್ರಹಿಗಳಿಗೆ ಕೈಕೋಳ ಹಾಕಲಾಗಿತ್ತೆಂದು ಸೋಷಲಿಸ್ಟ್ ಪಾರ್ಟಿಯು ಕೇಂದ್ರ ಕಛೇರಿಯು ಆಪಾದಿಸಿದೆ.

ಸಹಾಯ ಮುಖ್ಯ

ವಾಷಿಂಗ್ಟನ್ 28 — ಅಮೇರಿಕದ ರಕ್ಷಣೆಗೆ ಭಾರತದ ಸ್ವಾತಂತ್ರ್ಯ ಪ್ರಧಾನವೆಂದು ಅಮೇರಿಕದ ಉಪಾಧ್ಯಕ್ಷ ನಿಕ್ಸನ್ ತಿಳಿಸಿ ಭಾರತಕ್ಕೆ ಸಹಾಯ ಮಾಡಬೇಕಾದುದು ಅಗತ್ಯ ಎಂದರು.

ನಿನ್ನೆ ಎಂಟು ಇಂಜಿನುಗಳ ವಿಮಾನ ಮಂಜು ಮುಸುಕಿದ ಬಿಟ್ಟಿಕ್ಕೆ ಡಿಕ್ಕಿ ಬಡಿದು 30 ಜನರು ಸತ್ತರೆಂದು ಬೋಲ್ಟ್ ನ್ನಿಸ ವಾರ್ತೆ.

ರಂಗೂನ್ 27 — ಬಸ್ಸೀ ನಗರದಲ್ಲಿ ವಿನಾಶಕಾರಕ ಅಗ್ನಿ ಅನಾಹುತ ಆಗಿ 2 ಸಾವಿರ ಮನೆಗಳು ಭಸ್ಮ ಆಗಿ ಪ್ರಾಣಾಪಾಯ ವರದಿ ಆಗಿಲ್ಲ ರೂ 2 ಕೋಟಿ ನಷ್ಟ ಅಂದಾಜಾಗಿದೆ.

ಮೈಸೂರು 27 — ಮೈಸೂರು ದಕ್ಷಿಣದಲ್ಲಿರುವ ಸಶಾ ವಾಲೇಸು ಫರ್ಟಿಲೈಸರ್ಸ್‌ನಲ್ಲಿ ನಿನ್ನೆ ಮಧ್ಯಾಹ್ನ ಬೆಂಕಿ ಅನಾಹುತ ಆಗಿ ರೂ 25 ಸಹಸ್ರ ಬೆಲೆಯ ಪದಾರ್ಥಗಳು ನಾಶವಾಗಿವೆ

ತಿರುವೇಂದ್ರಂ 27 — ಕೇರಳದ ಬಂದೀಖಾನೆಯಲ್ಲಿ ಬಂದಿಗಳಿಗೆ ಹೆಚ್ಚು ಅಕ್ಕಿ ಕೊಡುತ್ತಿದ್ದುದು ಸಂ|| ನಹರೂರಿಗೆ ಒಪ್ಪಿಗೆ ಆಗಲಿಲ್ಲವೆಂದು, ಆದ್ದರಿಂದ ಪ್ರಾಂತ ಸರ್ಕಾರ 14 ಔನ್ಸುಗಳ ಅಕ್ಕಿಗೆ 4 ಔನ್ಸು ಗೋಧಿ ಕೊಡಲು ಆರಂಭಿಸಿತೆಂದು ಮಂತ್ರಿ ತಿಳಿಸಿದರು

ಎರ್ನಾಕುಲಂ 27 — ಹೋಗಿಬರುವ ಪ್ರಯಾಣಕರ ವಾಹನಗಳಿಗೆ ಅಡ್ಡ ಗಟ್ಟುತ್ತಿದ್ದ ವಿದ್ಯಾರ್ಥಿ ಗುಂಪಿನ ಮೇಲೆ ಪೋಲೀಸರು ಅಶ್ರುವಾಯು ಪ್ರಯೋಗಿಸಿದರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

1 ದಶಮಿ ಆದಾಯ :

ವಾರ್ತಾತರಂಗ

ನವದೆಹಲಿ 25— ಕೇಂದ್ರ ಸರ್ಕಾರದವರು ವಿವಿಧ ರಾಜ್ಯ ಸರಕಾರಂಗಳಿಗೆ 1957 ರ ಜೂನ್-ಡಿಸೆಂಬರು ಅವಧಿಯಲ್ಲಿ 488500 ಟನ್ನುಗಳಷ್ಟು ಅಕ್ಕಿಯನ್ನು ಹಂಚಿರುವರು

ನವದೆಹಲಿ 25— ಭಾರತ ಸರಕಾರದ ಆಹಾರ ಮತ್ತು ಬೇಸಾಯ ಮಂತ್ರಿ ಶಾಖೆಯು ಅಂಕಿಅಂಶಗಳ ಸಂಗ್ರಹಣ ವಿಭಾಗದ 57-58 ರ ಎಳ್ಳಿನ ಬೆಳೆಯು ಅಖಿಲ ಭಾರತ ಮಟ್ಟದ ಅಂದಾಜಿನ ಸ್ವಕಾರ ಈ ವರ್ಷ 5287000 ಎಕರೆಗಳಷ್ಟು ಎಳ್ಳನ್ನು ಬೆಳೆಯಲಾಗಿದೆ

ವಾಷಿಂಗ್ಟನ್ 25— ಇಂಡಿಯಾವು ಅಮೇರಿಕಾದಿಂದ 1951 ರಲ್ಲಿ ಪಡೆದ ಗೋಧಿ ಸಾಲದ ಬಾಕಿಯನ್ನು ರೂಪಾಯಿನಲ್ಲಿ ಪಾವತಿಮಾಡಲು ಕೇಳಿರುವುದಾಗಿ ಪ್ರಕಟವಾಗಿದೆ

ಬೊಂಬಾಯಿ 25— ರಾಜ್ಯದ 58-59 ರ ಬಜೆಟ್ ಜೋತವಾಗಿದ್ದು, 3 ಕೋಟಿ ರೂಗಳ ಹೊಸ ಕಂದಾಯ ವಿಧಿಸುವ ಯೋಜನೆಯಿದೆಯೆಂದು ಶಾಸನ ಸಭೆಯಲ್ಲಿ ಹಣಕಾಸಿನ ಮಂತ್ರಿ ಡಾ || ಜೀವರಾಜ ಮೇಥಾ ತಿಳಿಸಿದರು.

ಕಲ್ಕತ್ತಾ 26— ಹೌರಾದಿಂದ ಹೊರಟಿದ್ದ ಮೊಕಮೇಹ್ ಎಕ್ಸ್‌ಪ್ರೆಸ್ಸು ರೈಲಿನಲ್ಲಿ ಹೌರಾದ 50 ಮೈಲಿ ದೂರದಲ್ಲಿ ಅಲಹಾಂದ ಸಮೀಪ ಎಳೆದು ರೈಲು ನಿಂತಾಗ ಸಶಸ್ತ್ರ ದರೋಡೆಗಾರರು ಬಂದು ಮೂರನೇ ತರಗತಿಯ ಪ್ರಯಾಣೀಕರನ್ನು ಲೂಟಿಮಾಡಲುಪಕ್ರಮಿಸಿದರು — ಅಷ್ಟರಲ್ಲಿ ಬರ್ವಾ ಸ್ಟೇಷನ್ನಿಗೆ ತಿಳಿದು ಅಲ್ಲಿಂದ ಪೋಲೀಸರು ಬಂದು 6 ಮಂದಿಯನ್ನು ದಸ್ತಗಿರಿಮಾಡಿದರು

ಲಂಡನ್ 25— ಬ್ರಸಲ್ಸಿನಲ್ಲಿ ಎಪ್ರಿಲ್‌ನಲ್ಲಿ ನಡೆಯುವ ವಿಶ್ವ ಸಂತೆಯಲ್ಲಿ ರಷ್ಯಾವು ಮುಸಕಿನ ಜೋಳದಿಂದ ತೆಗೆದ ಚಿನ್ನವನ್ನು ಪೆವಿಲಿಯನ್ನಲ್ಲಿ ಪ್ರದರ್ಶಿಸುವುದೆಂದು ಮಾಸ್ಕೋ ರೇಡಿಯೋ ಸಾರಿದೆ

ವಿವಾಹ ಮಹೋತ್ಸವ

ಚಿ || ಸೌ || ಸುಲೋಚನ (ಶ್ರೀ ಸಿ. ಕೃಷ್ಣಪ್ಪನವರ ಪುತ್ರಿ) ಮತ್ತು ಚಿ || ಎ ಪಿ ರಾಮಣ್ಣ (ಶ್ರೀ ಎ ಕೆ ವೆಂಕಟರಂಗಣ್ಣನವರ ಪುತ್ರ) ಇವರ ವಿವಾಹ ಮಹೋತ್ಸವವು ಬನಶಂಕರಿ ೨ನೇ ಸ್ಟೇಜಿನಲ್ಲಿರುವ ರಾಘವಾಕೃಷ್ಣ ನಿಲಯದಲ್ಲಿ ವಿಜೃಂಭಣೆಯಿಂದ ನೆರವೇರಿತು.

ನ್ಯೂ ಅಪೇರಾ

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿರುವ

ಯಶಸ್ವಿ 4 ನೇ ವಾರ

ಶಿವನನ್ನೇ ಸೋಲಿಸುವ ವೀರನಾದರೂ
ಶಕ್ತಿಯನ್ನು ಗೆಲ್ಲಲಾರದವನ ಕಥೆ

ಭೂಮಿಕೆ : ರಾಜಕುಮಾರ್, ಕಲ್ಯಾಣ ಕುಮಾರ್, ಎಸ್. ವಿ. ರಂಗರಾವ್, ಅಶ್ವತ್ಥ್, ಸಿದ್ಧೇಶ ಕುಮಾರ್, ಜಮುನ, ಬಿ. ಸರೋಜಾ ದೇವಿ, ಹೇಮಲತ, ಗೋಪಿಕೃಷ್ಣ, ಕಮಲಾ ಲಕ್ಷ್ಮಣ್, ಇ. ವಿ. ಸರೋಜ

ಅಮೋಘ ಕನ್ನಡ ಚಿತ್ರ ದಿನ 3 ಪ್ರದರ್ಶನಗಳು

ಹಂಚಿಕೆ : ಕರ್ನಾಟಕ ಫಿಲಂಸ್

ವಿ.ವಿ.ಎಂ ರವರ
ಭೂಕೈಲಾಸ

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟಿಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ವೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

ವುಡ್‌ಲ್ಯಾಂಡ್ಸ್

ಜನಭರಿತ 2 ನೇ ವಾರ

ಅಪರಾಧಿ ಕೋನ್?

ಇದು ಎಂದಿಗೂ ಮರೆಯಲಾಗದಂಥಹ ಅಪರಾಧದ ರೋಮಾಂಚಕಾರಿ ಕಥೆ

ಮುಂದೇನಾಗುವುದೋ ಎಂದು ನೋಡುತ್ತಾ ಸ್ತಂಭಿಭೂತರಾಗಿರುವಿರಿ!

ಕೊಲೆಗಾರನನ್ನು ನೀವು ಅರಿಯಬಲ್ಲಿರಾ?

ಕಡೆಯ ವರಿಗೆ ನೋಡಿದ ಮೇಲೂ

ನಿಮ್ಮ ನಿರ್ಧಾರ ಸರಿಯೆ ?

..... ಹಾಗಾದರೆ ನಿಮ್ಮ

ಉತ್ತರವನ್ನು ನಮಗೆ ತಿಳಿಸಿ

ಉಮಾ

ತೂಫಾನ್ ಕ್ವೀನ್

(ತಮಿಳು ಚಿತ್ರ)

ಪಾತ್ರ— ಆರ್. ಬಿ. ಲಕ್ಷ್ಮೀದೇವಿ
ರಾಜಗೋಪಾಲ್

ಬೆಳಗಿನ ಪ್ರದರ್ಶನ 10-30 ಕ್ಕೆ —
ತಾ || 28 ರಿಂದ 3 ದಿವಸಗಳು ಮಾತ್ರ

KILLER APE
(Technicolor Picture)

ಬೆಂಗಳೂರಿನಿಂದ ಟೂರಿಸ್ಟ್ ಕ್ಯಾರೇಜ್‌ನಲ್ಲಿ
6-4-58 ರಲ್ಲಿ ಹೊರಡುವ

ಬದರೀ - ಕಾಶೀರ್ ಮತ್ತು ಕೇರಳ

ಉತ್ತರ ಭಾರತದ ಸಂಪೂರ್ಣ ಯಾತ್ರೆ

[ವಿ. ಸೂ.— ನಗರಂಗಳಲ್ಲಿ ಬಸ್ ಸೌಕರ್ಯ ಏರ್ಪಡಿಸಿದೆ]

— ವಿವರಗಳಿಗೆ —

ರಾಮಕೃಷ್ಣ ಟ್ರಾವಲ್ಸ್

ಇಂಡಿಯನ್ ಪ್ರೆಸ್ ಕಟ್ಟಡ, (ಫೋನ್ 2810) ಬಳೇಪೇಟೆ, ಬೆಂಗಳೂರು 2

ಸತ್ಯವಾದಿ ಆಫೀಸು, ಚಾಮರಾಜಪುರಂ, ಮೈಸೂರು.

Edited, Printed & Published by Dharma Prachara Nirata M S Krishna Rao at the Satyavadi Press Chamarajapuram Mysore